# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಒಂದು ಉದ್ಯಮ)**

**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010

ದೂರವಾಣಿ:080-23407011-25 ಇ–ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಪರಿಷ್ಕರಣೆ:ನೀರಿನ ದರ:2024 ದಿನಾಂಕ: 01-04-2024

## ಕಛೇರಿ–ಆದೇಶ

**ವಿಷಯ: ನೀರಿನ ದರ ಪರಿಷ್ಕರಣೆ ಬಗ್ಗೆ.**

ಉಲ್ಲೇಖ: ಕಛೇರಿ ಆದೇಶ ಸಮನ್ವಯ:ಪರಿಷ್ಕರಣೆ:ನೀರಿನ ದರ:2022 ದಿನಾಂಕ 29.03.2022

**************

ವಿಷಯಕ್ಕೆ ಸಂಬಂಧಪಟ್ಟಂತೆ, 2024–25ನೇ ಸಾಲಿಗೆ ನೀರಿನ ಶುಲ್ಕದ ದರಗಳನ್ನು ಪರಿಷ್ಕರಿಸಬೇಕಾಗಿರುತ್ತದೆ. ಕಾರಣ, ನಿಗಮದ ವತಿಯಿಂದ ನೀರು ಸರಬರಾಜಿನ ವ್ಯವಸ್ಥೆ ಕಲ್ಪಿಸಲಾಗಿರುವ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪ್ರಸಕ್ತ ಸಾಲಿನ ನೀರಿನ ಶುಲ್ಕದ ಹಾಲಿ ಚಾಲ್ತಿಯಲ್ಲಿರುವ ದರವನ್ನು **ಶೇಕಡ 10ರಷ್ಟು ಹೆಚ್ಚಳ ಮಾಡಿ** **ದಿನಾಂಕ 01.04.2024 ರಿಂದ 31.03.2025ರವರೆಗೆ ಅನ್ವಯವಾಗುವಂತೆ** 'ನೀರಿನ ಶುಲ್ಕ ದರ'ವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿರುತ್ತದೆ.

### I. ನೀರಿನ ಮಾಪಕ (Water Meter) ಇಲ್ಲದಿರುವ ಮಳಿಗೆಗಳಿಗೆ

(ರೂ.ಗಳಲ್ಲಿ)/ಪ್ರತಿ ತಿಂಗಳಿಗೆ)

| ಕ್ರಮ. ಸಂಖ್ಯೆ | ಮಳಿಗೆ ಮಾದರಿ | ಬೆಂಗಳೂರು/ಹುಬ್ಬಳ್ಳಿ/ ಮಂಗಳೂರು/ಮೈಸೂರು | | ಜಿಲ್ಲಾ ಕೇಂದ್ರ ಸ್ಥಳಗಳು | | ಇನ್ನಿತರ ಸ್ಥಳಗಳು | |
|---|---|---|---|---|---|---|---|
| | | ಚಾಲ್ತಿ ನೀರಿನ ಶುಲ್ಕ ದರ | **01.04.2024 ರಿಂದ 31.03.2025 ರವರೆಗೆ ಪರಿಷ್ಕೃತ ನೀರಿನ ದರ** | ಚಾಲ್ತಿ ನೀರಿನ ಶುಲ್ಕ ದರ | **01.04.2024 ರಿಂದ 31.03.2025 ರವರೆಗೆ ಪರಿಷ್ಕೃತ ನೀರಿನ ದರ** | ಚಾಲ್ತಿ ನೀರಿನ ಶುಲ್ಕ ದರ | **01.04.2024 ರಿಂದ 31.03.2025 ರವರೆಗೆ ಪರಿಷ್ಕೃತ ನೀರಿನ ದರ** |
| 1. | ಎ | 1101.00 | **1211.00** | 787.00 | **866.00** | 471.00 | **518.00** |
| 2. | ಬಿ | 787.00 | **866.00** | 471.00 | **518.00** | 317.00 | **349.00** |
| 3. | ಸಿ | 629.00 | **692.00** | 317.00 | **349.00** | 237.00 | **261.00** |
| 4. | ಡಿ | 376.00 | **414.00** | 237.00 | **261.00** | 160.00 | **176.00** |
| 5. | ಮಿನಿ/ ಸೂ.ಮಿನಿ | 160.00 | **176.00** | 160.00 | **176.00** | 129.00 | **142.00** |

...2

**II.** ನೀರಿನ ಮಾಪಕ (**Water Meter**) ಇಲ್ಲದಿರುವ ನಿವೇಶನಗಳಿಗೆ: (ರೂಗಳಲ್ಲಿ)/ಪ್ರತಿ ತಿಂಗಳಿಗೆ) :

| ಕ್ರ. ಸಂ. | ವಿಸ್ತೀರ್ಣತೆ | ಬೆಂಗಳೂರು/ಹುಬ್ಬಳ್ಳಿ/ ಮಂಗಳೂರು/ಮೈಸೂರು | | ಜಿಲ್ಲಾ ಕೇಂದ್ರ ಸ್ಥಳಗಳು | | ಇನ್ನಿತರ ಸ್ಥಳಗಳು | |
|---|---|---|---|---|---|---|---|
| | | ಚಾಲ್ತಿ ನೀರಿನ ಶುಲ್ಕ ದರ | 01.04.2024 ರಿಂದ 31.03.2025 ರವರೆಗೆ ಪರಿಷ್ಕೃತ ನೀರಿನ ದರ | ಚಾಲ್ತಿ ನೀರಿನ ಶುಲ್ಕ ದರ | 01.04.2024 ರಿಂದ 31.03.2025 ರವರೆಗೆ ಪರಿಷ್ಕೃತ ನೀರಿನ ದರ | ಚಾಲ್ತಿ ನೀರಿನ ಶುಲ್ಕ ದರ | 01.04.2024 ರಿಂದ 31.03.2025 ರವರೆಗೆ ಪರಿಷ್ಕೃತ ನೀರಿನ ದರ |
| 1. | 100ಚ.ಮೀ. ವರೆಗೆ | 317.00 | **349.00** | 237.00 | **261.00** | 160.00 | **176.00** |
| 2. | 101 ಚ.ಮೀ. ನಿಂದ 300 ಚ.ಮೀ. ವರೆಗೆ | 471.00 | **518.00** | 317.00 | **349.00** | 237.00 | **261.00** |
| 3. | 301 ಚ.ಮೀ. ನಿಂದ 500 ಚ.ಮೀ. ವರೆಗೆ | 629.00 | **692.00** | 471.00 | **518.00** | 317.00 | **349.00** |
| 4. | 501 ಚ.ಮೀ. ನಿಂದ 700 ಚ.ಮೀ ವರೆಗೆ | 787.00 | **866.00** | 629.00 | **692.00** | 471.00 | **518.00** |
| 5. | 701 ಚ.ಮೀ. ನಿಂದ 1000 ಚ.ಮೀ. ವರೆಗೆ | 941.00 | **1035.00** | 787.00 | **866.00** | 629.00 | **692.00** |
| 6. | 1001 ಚ.ಮೀ. ಮೇಲೆ | 1258.00 | **1384.00** | 866.00 | **953.00** | 706.00 | **777.00** |

III. ನೀರಿನ ಮಾಪಕ (Water Meter) ಇರುವ ಮಳಿಗೆ/ನಿವೇಶನಗಳಿಗೆ ರೂ.55.00 ಪ್ರತಿ 1000 ಲೀಟರ್‌ಗೆ ಇದ್ದು, ಕನಿಷ್ಟ ರೂ. 518.00 ಪ್ರತಿ ತಿಂಗಳಿಗೆ ನಿಗಧಿಪಡಿಸಿರುವುದು ಹಾಗೂ ಬಹು ಮಹಡಿ ಕಟ್ಟಡಗಳಿಗೆ ಸಂಬಂಧಿಸಿದಂತೆ ಒಂದು ವೇಳೆ ಮೇಲಿನಂತೆ ನೀರಿನ ವಸೂಲಾತಿ ವೆಚ್ಚದ ಮೊತ್ತವು ನೀರಿನ ಸೌಲಭ್ಯವನ್ನು ಒದಗಿಸುವುದಕ್ಕೆ ತಗಲುವ ನೈಜ ವೆಚ್ಚಕ್ಕಿಂತ ಕಡಿಮೆಯಾದಲ್ಲಿ ನೈಜ ವೆಚ್ಚಕ್ಕೆ ಹೊಂದಾಣಿಕೆಯಾಗುವಂತೆ ಅವಶ್ಯ ಕ್ರಮ ಕೈಗೊಳ್ಳತಕ್ಕದ್ದು.

IV. ನೀರು ಆಧಾರಿತ ಕೈಗಾರಿಕಾ ಘಟಕಗಳು ಹಾಗೂ ನಿರ್ಮಾಣದ ಉದ್ದೇಶಕ್ಕಾಗಿ ನೀರಿನ ಬಳಕೆಗೆ, ಮೇಲಿನ ಪರಿಷ್ಕೃತ ದರದ **ಇಮ್ಮಡಿ (ದುಪ್ಪಟ್ಟು)** ದರವನ್ನು ನೀರಿನ ಶುಲ್ಕವಾಗಿ ವಸೂಲು ಮಾಡತಕ್ಕದ್ದು.

V. ನೀರಿನ ಮಾಪಕ ಅಳವಡಿಸಿದ್ದು ಅದು ಕಾರ್ಯನಿರ್ವಹಿಸದೇ ಇರುವಂತಹ ಪ್ರಕರಣಗಳಲ್ಲಿ ಹಿಂದಿನ 6 ತಿಂಗಳ ಸರಾಸರಿ ಅಥವಾ ನೀರಿನ ಮಾಪಕ ಇಲ್ಲದ ಪ್ರಕರಣಗಳಲ್ಲಿ ವಿಧಿಸುವ ದರ ಇವುಗಳಲ್ಲಿ **ಯಾವುದು ಜಾಸ್ತಿ** ಇರುವುದೋ ಆ ದರದಲ್ಲಿ ನೀರಿನ ಶುಲ್ಕವನ್ನು ವಸೂಲು ಮಾಡತಕ್ಕದ್ದು. ಹಾಗೆಯೇ ಅಂತಹ ನೀರಿನ ಮಾಪಕಗಳನ್ನು ಜರೂರಾಗಿ ಹಂಚಿಕೆದಾರರಿಂದಲೇ **ದುರಸ್ತಿ** ಮಾಡಿಸತಕ್ಕದ್ದು.

VI. ಹಂಚಿಕೆದಾರರುಗಳು ಮೂರು ತಿಂಗಳುಗಳ ನೀರಿನ ಶುಲ್ಕದ ಬಾಕಿಯನ್ನು ಪಾವತಿ ಮಾಡುವಲ್ಲಿ ವಿಫಲರಾದಲ್ಲಿ, ನೀರಿನ ಸಂಪರ್ಕವನ್ನು ಕಡಿತಗೊಳಿಸುವುದು. ತದನಂತರದಲ್ಲಿ ನೀರಿನ ಸಂಪೂರ್ಣ ಬಾಕಿಯನ್ನು ಶೇ. 18 ರಷ್ಟು ಬಡ್ಡಿಯನ್ನು ಪಡೆಯುವುದರೊಂದಿಗೆ ರೂ. 2830/-ಗಳ ಮರು-ಸಂಪರ್ಕ ಶುಲ್ಕವನ್ನು ವಸೂಲು ಮಾಡಿದ ನಂತರದಲ್ಲಿ ಮಾತ್ರ ನೀರಿನ ಸಂಪರ್ಕವನ್ನು **ಮರು-ನೀಡತಕ್ಕದ್ದು.**

VII. ನೀರಿನ ಹೊಸ ಸಂಪರ್ಕ ನೀಡುವ ಸಂದರ್ಭದಲ್ಲಿ ರೂ. 2830/- ಗಳನ್ನು **ಸಂಪರ್ಕ ದರವಾಗಿ** ಪಡೆಯತಕ್ಕದ್ದು.

...3

VIII. ನಿಗಮದ ಯಾವುದೇ ಕೈಗಾರಿಕಾ ವಸಾಹತುವಿನಲ್ಲಿ ಮೇಲೆ ತಿಳಿಸಿರುವ ದರದಂತೆ ನೀರಿನ ದರವನ್ನು ವಸೂಲು ಮಾಡಿದಾಗ್ಯೂ ಸಹ ಖರ್ಚು ಹೆಚ್ಚಾದಲ್ಲಿ ಅದನ್ನು ಸರಿಹೊಂದಿಸಿಕೊಳ್ಳುವ ರೀತಿಯಲ್ಲಿ ನೀರಿನ ದರವನ್ನು ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು ಪರಿಷ್ಕರಿಸಿ, ಅದರಂತೆ ವಸೂಲು ಮಾಡತಕ್ಕದ್ದು ಮತ್ತು ತತ್ಸಂಬಂಧದ ವಿಷಯದ ಬಗ್ಗೆ ಕೇಂದ್ರ ಕಛೇರಿಗೆ ಅಗತ್ಯ ಮಾಹಿತಿ ಒದಗಿಸತಕ್ಕದ್ದು. ಸದರಿ ವಿಷಯದ ಬಗ್ಗೆ ಕಾಲಕಾಲಕ್ಕೆ ಸಂಬಂಧಪಟ್ಟ ಉಪ ಪ್ರಧಾನ ವ್ಯವಸ್ಥಾಪಕರವರೂ ಸಹ ಕೂಲಂಕಷವಾಗಿ ಪರಿಶೀಲಿಸಿ ಅವಶ್ಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಆಂತರಿಕ ಲೆಕ್ಕ ಪರಿಶೋಧನಾ ವಿಭಾಗದವರು ಲೆಕ್ಕ ಪರಿಶೋಧನೆಗಾಗಿ ವಿಭಾಗೀಯ / ಶಾಖಾ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ವಿವರಗಳನ್ನೂ ಸಹ **ತಪ್ಪದೇ ಕಡ್ಡಾಯವಾಗಿ** ಪರಿಶೀಲಿಸತಕ್ಕದ್ದು.

IX. ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಗೆ ಬರುವ ಎಲ್ಲಾ ಬಳಕೆದಾರರಿಗೆ **ಪರಿಷ್ಕೃತ ದರವು ಕಡ್ಡಾಯವಾಗಿ ದಿನಾಂಕ: 01.04.2024ರಿಂದ ಜಾರಿಗೆ ಬರುವುದೆಂದು** ಮತ್ತು ವಿಳಂಬಿತ ಪಾವತಿಯ ಮೇಲೆ ಶೇ. 18 ರಷ್ಟು ಬಡ್ಡಿ ವಿಧಿಸಲಾಗುವುದೆಂಬ ವಿಷಯವನ್ನು ಸೂಕ್ತ ಸ್ವೀಕೃತಿಯೊಂದಿಗೆ ತಿಳಿಸಿ, ಅದರಂತೆ ನೀರಿನ ದರವನ್ನು ವಸೂಲಿ ಮಾಡತಕ್ಕದ್ದು.

X. ಈ ಹಿಂದಿನ ವರ್ಷಗಳಲ್ಲಿ C.I.D. ಯೋಜನೆ ಅಥವಾ ನಿಗಮದಿಂದ ಬಂಡವಾಳ ತೊಡಗಿಸಿ, ನೀರಿನ ಸರಬರಾಜು ವ್ಯವಸ್ಥೆಗಳನ್ನು ಮಾಡಿದ ಪ್ರಕರಣಗಳನ್ನು ತಕ್ಷಣ ಕೈಗಾರಿಕಾ ವಿಭಾಗಕ್ಕೆ ಮಾಹಿತಿ ನೀಡಲು ನಿಗಮದ ವಿದ್ಯುತ್ ವಿಭಾಗಕ್ಕೆ ಸೂಚಿಸಲಾಗಿದೆ. ಮುಂದುವರೆದು, ಕೈಗಾರಿಕಾ ವಸಾಹತು ವಿಭಾಗದ ಮೇಲಾಧಿಕಾರಿಗಳು ತಕ್ಷಣ ಇದನ್ನು ಅನುಷ್ಠಾನಗೊಳಿಸಿ ನೀರಿನ ಬಿಲ್ಲಿನ ಮೊತ್ತ ವಸೂಲಿ ಮಾಡುವುದು.

XI. ಮೇಲೆ ಸೂಚಿಸಿರುವ ಮಾರ್ಗಸೂಚಿಗಳನ್ನು ನಿಗಮದ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರುಗಳು **ಕಡ್ಡಾಯವಾಗಿ** ಹಾಗೂ **ಕಟ್ಟುನಿಟ್ಟಾಗಿ** ಪಾಲಿಸತಕ್ಕದ್ದು.

**ವ್ಯವಸ್ಥಾಪಕ ನಿರ್ದೇಶಕರು**

**ಅವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ.

**ಪ್ರತಿ:**

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ & ಭೂಸ್ವಾಧೀನ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು
2. ಅಧೀಕ್ಷಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ) / (ವಾಣಿಜ್ಯ) / (ಸಮನ್ವಯ) ಕರಾಸಕೈಅನಿನಿ, ಬೆಂಗಳೂರು
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ಕಛೇರಿ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.